**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 509/18**

**ಸಿ.ಡಬ್ಲ್ಯೂ-5 ಪಿ.ಡಬ್ಲ್ಯೂ-5**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹದೇವ |
| ತಂದೆಯ/ ಗಂಡನ ಹೆಸರು | : | ಕಪ್ಪನಯ್ಯ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ಮೈಸೂರು |

**ದಿನಾಂಕ 04.09.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2017 ರಿಂದ 2020 ರವರೆಗೆ ಹೆಚ್ ಡಿ ಕೋಟೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 06.09.2017 ರಂದು BJP ಕಾರ್ಯಕರ್ತರು ಮಂಗಳೂರು ಚಲೋ ಬೈಕ್ ರಾಲಿ ಹಮ್ಮಿಕೊಂಡಿದ್ದು, ಯಾವುದೇ ರಾಲಿ ಅಥವಾ ಪ್ರತಿಭಟಣೆ ಮಾಡಬಾರದು ಎಂದು ಡಿ.ಸಿ ಯವರು ಆದೇಶ ಇದ್ದರೂ ಸಹ ಬೈಕ್ ರೈಡ್ ಹೋಗುತ್ತಿದ್ದರಿಂದ ಚಾಸಾ 23 ರವರು ಅದನ್ನು ತಡೆಯಲು ಚಾಸಾ 1 ರವನ್ನು ಮತ್ತು ಸಿಬ್ಬಂದಿಗಳನ್ನು ಠಾಣೆ ಮುಂದೆ ಬದುಬಸ್ತ ಮಾಡಿಕೊಂಡು ರಸ್ತೆಗೆ ಬ್ಯಾರಿಕೇಡ್ ಅಳವಡಿಸಿ ಬೆಳಿಗ್ಗೆ ಸುಮಾರು 11 ಗಂಟೆ ಸಮಯದಲ್ಲಿ 40-50 ಜನರು BJP ಬಾವುಟಗಳನ್ನು ಹಿಡಿದು ಬೈಕ್ ನಲ್ಲಿ ಹೆಚ್.ಡಿ ಕೋಟೆ ಬಸ್ ನಿಲ್ದಾಣದಿಂದ ಹುಣಸೂರು ಕಡೆಗೆ

ಹೋಗಲು ಬಂದಾಗ, ಚಾಸಾ 1 ಮತ್ತು 23 ರವರು ಸಿಬ್ಬಂದಿಗಳಾದ ನಮ್ಮ ಜೊತೆ ಸೇರಿ ಬೈಕ್ ರಾಲಿ ತಡೆದು ಡಿ.ಸಿ ರವರ ಆದೇಶವನ್ನು ತಿಳಿಸಿ ವಾಪಸ್ಸು ಹೋಗಲು ತಿಳಿಸಿರುತ್ತೇವೆ. ಆಗ BJP ಕಾರ್ಯಕರ್ತರು ಬ್ಯಾರಿಕೇಡ್ ತಳ್ಳಿ ಮುಂದೆ ಹೋಗಲು ಪ್ರಯತ್ನಿಸಿದ್ದರಿಂದ ರಾಲಿ ಹೋಗುತ್ತಿದ್ದವರನ್ನು ದಸ್ತಗಿರಿ ಮಾಡಿ ಮತ್ತು 12 ಬೈಕ್ ಗಳನ್ನು ಅಮಾನತ್ತುಪಡಿಸಿಕೊಂಡು ಚಾಸಾ 1 ರವರು ಪ್ರಕರಣ ದಾಖಲೆಸಿರುತ್ತಾರೆ. ಸದರಿ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇವೆ.

**ಪಾಟೀ ಸವಾಲುಃ  ಆರೋಪಿತರ ಪರ ವಕೀಲರಿಂದಃ**

ಯಾವುದಾದರೂ ಪ್ರತಿಭಟಣೆ ಅಥವಾ ರಾಲಿ ಮಾಡಬೇಕಾದರೆ ನಮ್ಮ ಠಾಣೆಯಿಂದ ಅನುಮತಿ ಪಡೆಯುತ್ತಾರೆ ಎಂದರೆ  ಡಿಸಿ ಅವರ ಆದೇಶ ಇದ್ದುದ್ದರಿಂದ ಅನುಮತಿ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಪ್ರತಿಭಟಣೆ ಮಾಡುತ್ತಾರೆ ಎಂದು ಹಿಂದಿನ ದಿನ ತಿಳಿದಿರುತ್ತದೆ. ಸದರಿ ದಿನ ನಾವು 20 ಜನ ಇದ್ದೆವು. ಸುಮಾರು 30 ಬೈಕ್ ಗಳಲ್ಲಿ ರಾಲಿ ಬಂದಿರುತ್ತಾರೆ. ಸದರಿ 30 ಬೈಕ್ ಗಳಲ್ಲಿ ಯಾರು ಯಾರು ಬಂದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಬ್ಯಾರಿಕೇಡ್ ನ್ನು ಸರಿಸಿ ಮುಂದೆ ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ. ಯಾವ ಯಾವ ಬೈಕ್ ಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ ಎಂದು ಅವುಗಳ ನಂಬರ್ ಹೇಳಲು ಆಗುವುದಿಲ್ಲ. ಸುಮಾರು 40-50 ಜನ ಇದ್ದು, 10-12 ಜನರ ಹೆಸರುಗಳನ್ನು ಹೇಳುತ್ತೇನೆ. ಈ ಪ್ರಕರಣದ ಆರೋಪಿಗಳು ಆರೋಪಿ ದಿನ ಮಂಗಳೂರು ಚಲೋ ರಾಲಿಯಲ್ಲಿ ಭಾಗವಹಿಸಿರಲಿಲ್ಲ ಮತ್ತು ಯಾವುದೇ ಪಕ್ಷದ ಬಾವುಟಗಳನ್ನು ಇಟ್ಟುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**